<u>ದಿನಾಂಕ **12-04-2023** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>: ಪಾಟೀ ಸವಾಲು : ಎದುರುದಾರ ಪರ ಶ್ರೀ.ಎಸ್ ಎಫ್ ಡಬ್ಲ್ಯೂ ವಕೀಲರಿಂದ:</u>

ನಾನು ಬಿ ಎ. ಬಿ ಇಡಿ ಓದಿದ್ದೇನೆ. ಈ ಅರ್ಜಿಯನುನ ಸಲ್ಲಿಸಲು ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಮತ್ತು ಎದುರುದಾರರ ಮದುವೆ ದಿನಾಂಕ **21-6-2018** ರಂದು ಶ್ರೀ. ಸಿಂಧಗಿ ಕಲ್ಯಾಣ ಮಂಟಪದಲ್ಲಿ ಆಗಿದೆ. ಮದುವೆಯ ಖರ್ಚನ್ನು ಎದುರುದಾರರೇ ಭರಿಸಿದ್ದಾರೆ ಎಂದರೆ ಸರಿ. ಮದುವೆ ಕಾಲಕ್ಕೆ ಎದುರುದಾರರಿಗೆ ನಮ್ಮ ಕಡೆಯಿಂದ ಏನೂ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದೇವೆ. ಮದುವೆ ಕಾಲಕ್ಕೆ ಎದುರುದಾರರಿಗೆ ರೂ.**2,00,000-00** ವರೋಪಚಾರ ಕೊಟ್ಟಿದ್ದೇವೆ. ನನ್ನ ತವರು ಮನೆಯಲ್ಲಿ ಏನೂ ಆಸ್ತಿ ಇಲ್ಲ. ನನ್ನ ತಂದೆ ನಾನು ಚಿಕ್ಕವಳಿದ್ದಾಗಲೇ ತೀರಿಕೊಂಡಿದ್ದಾರೆ. ನಾನು **5** ನೇ ತರಗತಿಯಲ್ಲಿದ್ದಾಗ ನನ್ನ ತಂದೆ ತೀರಿಕೊಂಡಿದ್ದಾರೆ. ಮದುವೆಯಾದ ಮೂರು ದಿನಕ್ಕೆ ಎದುರುದಾರರ ಮನೆಗೆ ಬಾಳುವೆ ಮಾಡಲು ಹೋಗಿದ್ದೆ. ಆ ರೀತಿ ಹೋದ ನಂತರ **15** ದಿನ ಅವರ ಮನೆಯಲ್ಲಿದ್ದೆ. ತವರು ಮನೆಗೆ ಬಂದು **10** ದಿನ ಉಳಿದು ಪುನಃ ವಾಪಸ್ಸು ಎದುರುದಾರರ ಮನೆಗೆ ಹೋದೆ. ಆ ನಂತರ ನಾನು **5** ತಿಂಗಳು ಎದುರುದಾರರ ಮನೆಯಲ್ಲಿದ್ದೆ. ನಾನು ಎದುರುದಾರರ ಜೊತೆ ಇದ್ದಾಗ ಅವರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಇಲ್ಲ. ಹೊಡಿ ಬಡಿ ಮಾಡಿದ್ದಾರೆ. ಎದುರುದಾರರು ನಿಮಗೆ ಯಾವಾಗ ಹೊಡಿ ಬಡಿ ಮಾಡಿದರು ಎಂದರೆ ಕುಡಿದುಕೊಂಡು ಬಂದಾಗೆಲ್ಲ ಹೊಡಿ ಬಡಿ ಮಾಡುತ್ತಿದ್ದರು. ನಾನು ಎದುರುದಾರರು ನನಗೆ ಹೊಡಿ ಬಡಿ ಮಾಡಿದ ಬಗ್ಗೆ ದೂರನ್ನು ಕೊಟ್ಟಿಲ್ಲ, ಆದರೆ ಕೊಡಲು ಹೋಗಿದ್ದೆ. ದಿನಾಂಕ **4-1-2019** ರಂದು ನಾನು ತವರು ಮನೆಗೆ ಬಂದೆ. ಆ ರೀತಿ ಬಂದವಳು ವಾಪಸ್ಸು ಎದುರುದಾರರ ಮನೆಗೆ ಹೋಗಿಲ್ಲ. ಎದುರುದಾರರ ಜೊತೆ ಬಾಳುವೆ ಮಾಡಬೇಕೆಂದು ನಾನು ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ.

**2.** ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಹಾವೇರಿ ಮಹಿಳಾ ಠಾಣೆಯಲ್ಲಿ ದೂರು ನೀಡಿದ್ದೇನೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ದೂರು ನೀಡಲು ಹೋದಾಗ ಪೊಲೀಸರು ದೂರು ತೆಗೆದುಕೊಳ್ಳಲಿಲ್ಲ. ಹೆರಿಗೆಯಾದಾಗ ಆಸ್ಪತ್ರೆಯ ಖರ್ಚು ವಚ್ಚಗಳನ್ನು ಎದುರುದಾರರೇ ನೋಡಿಕೊಂಡಿದ್ದಾರೆ ಎಂದರೆ ಇಲ್ಲ. ನಾನು ತವರು ಮನೆಗೆ ಹೋದಾಗ **5** ತಿಂಗಳ ಗರ್ಭಿಣಿಯಾಗಿದ್ದೆ. ಎದುರುದಾರರಿಗೆ

ಹಿರಿಯರು ಯಾವಾಗ ಬುದ್ಧಿ ಹೇಳಿದ್ದಾರೆ ಎಂದರೆ ಇಸವಿ ನೆನಪಿಲ್ಲ. ಯಾರು ಯಾರು ಬಂದಿದ್ದರು ಎಂದರೆ ಹೋತನಹಳ್ಳಿ ಮತ್ತು ಹೊಸಪೇಟೆಯವರು ಬಂದಿದ್ದರು. ಹೋತನಹಳ್ಳಿಯಿಂದ ಗಂಗಪ್ಪ ಬಂದಿದ್ದರು, ಅವರ ಅಡ್ಡಹೆಸರು ಗೊತ್ತಿಲ್ಲ. ಹೊಸಪೇಟೆಯಿಂದ ನನ್ನ ಮಾವನಾದ ಮಾರ್ಕಂಡಪ್ಪ ಬಂದಿದ್ದರು, ಅವರ ತಂದೆಯ ಹೆಸರು ಮತ್ತು ಅಡ್ಡಹೆಸರು ಗೊತ್ತಿಲ್ಲ. ಬೇರೆ ಯಾರೂ ಬಂದಿರಲಿಲ್ಲ. ಎದುರುದಾರರು ನಮ್ಮ ಊರಿಗೆ ಬಂದಿದ್ದರು, ಆಗ ಅವರಿಗೆ ಬುದ್ಧಿವಾದ ಹೇಳಿದ್ದರು. ಹೊಡಿ ಬಡಿ ಮಾಡಬೇಡ ಎಂದು ಹಿರಿಯರು ಬುದ್ಧಿವಾದ ಹೇಳಿದರು. ಸರಿಯಾಗಿ ಹೊಂದಿಕೊಂಡು ಹೋಗುವಂತೆ ನನಗೆ ಬುದ್ಧಿವಾದ ಹೇಳಿದರು.

3. ಎದುರುದಾರರು ಡೈನಸ್ಟಿ ಕಂಪನಿಯಲ್ಲಿ ಸೇಲ್ಸ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಎದುರುದಾರರಿಗೆ ಜಮೀನು ಇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಎದುರುದಾರರಿಗೆ ನೆಲೋಗಲ್ ಊರಿನಲ್ಲಿ 3 ಎಕರೆ ಜಮೀನು ಇದೆ. ಅದು ಯಾವ ಸ್ವರೂಪದ ಜಮೀನು ಎಂದು ಹೇಳಲಾಗುವುದಿಲ್ಲ. ಎದುರುದಾರರು ಒಟ್ಟು 3 ಜನ ಮಕ್ಕಳು. ಎದುರುದಾರರಿಗೆ ಸಹೋದರಿಯರು ಇಲ್ಲ. ಎದುರುದಾರರ ತಂದೆ ತೀರಿಕೊಂಡಿದ್ದಾರೆ. ನಾನು ಎದುರುದಾರರೊಂದಿಗೆ 3-4 ತಿಂಗಳು ಮಾತ್ರ ಬಾಳುವೆ ಮಾಡಿ ನಂತರ ತವರು ಮನೆಗೆ ಬಂದಿದ್ದೇನೆ ಎಂದರೆ ಸರಿ. ಆ ರೀತಿ ತವರು ಮನೆಗೆ ಬಂದವಳು ವಾಪಸ್ಸು ಎದುರುದಾರರ ಮನೆಗೆ ಹೋಗಿಲ್ಲ ಎಂದರೆ ನನಗೆ ಜೀವ ಬೆದರಿಕೆ ಇತ್ತು. ಎದುರುದಾರರು ನನಗೆ ಹೊಡಿ ಬಡಿ ಮಾಡುತ್ತಾರೆ ಮತ್ತು ಅವರಿಂದ ಜೀವ ಬೆದರಿಕೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರೊಂದಿಗೆ ಜೀವನ ನಡೆಸುತ್ತಿದ್ದಾಗ ಹಾನಗಲ್ ನಲ್ಲಿ ಬೇರೆ ಮನೆ ಮಾಡಿಕೊಂಡು ಇರುವಾ ಎಂದು ಪೀಡಿಸುತ್ತಾ ಬಂದಿದ್ದೆ ಎಂದರೆ ಸರಿಯಲ್ಲ. ಎದುರುದಾರರು ತನ್ನ ಕುಟುಂಬದೊಂದಿಗೆ ಇರೋಣ ಎಂದು ಹೇಳಿದರೂ ಸಹ ನಾನು ಕೇಳದೇ ತವರು ಮನೆಗೆ ವಾಪಸ್ಸು ಹೋದೆ ಎಂದರೆ ಸರಿಯಲ್ಲ. ನಾನು ವಿಲಾಸಿ ಜೀವನ ಮಾಡಬೇಕೆಂಬ ಉದ್ದೇಶದಿಂದ ಎದುರುದಾರರನ್ನು ಪೀಡಿಸುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಹೊಂದಿಕೊಂಡು ಜೀವನ ಮಾಡೋಣ ಎಂದು ಸಾಕಷ್ಟು ಬಾರಿ ನನಗೆ ಬುದ್ಧಿಮಾತು ಹೇಳಿದರೂ ಸಹ ನಾನು ಕೇಳದೇ ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ತಾಯಿಯೂ ಕೂಡ ಹೊಂದಿಕೊಂಡು ಜೀವನ ನಡೆಸುವಂತೆ ನನಗೆ

ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ಎದುರುದಾರರು ನನ್ನ ತವರು ಮನೆಗೆ ಬಂದು **2-3** ಬಾರಿ ಕರೆದರೂ ಸಹ ನಾನು ಅವಮಾನ ಮಾಡಿ ಅವರನ್ನು ವಾಪಸ್ಸು ಕಳುಹಿಸಿದ್ದೇನೆ ಎಂದರೆ ಸರಿಯಲ್ಲ.

**4.** ನಾನು ಎದುರುದಾರರ ಜೊತೆ ವಾಸ ಮಾಡುತ್ತಿದ್ದಾಗ ಅವರಿಗೆ ಸರಿಯಾಗಿ ಊಟ ತಿಂಡಿ ಮಾಡಿ ಕೊಡದೇ ಸತಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಇಂದು ನಾಳೆ ಸರಿ ಹೋಗಬಹುದು ಎಂದು ಎದುರುದಾರರು ಹೊಂದಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ದೇವರಹೊಸಪೇಟೆ, ಹೋತನಹಳ್ಳಿ ಮತ್ತು ಹಾವೇರಿ ಗ್ರಾಮದವರು ಬುದ್ಧಿವಾದ ಹೇಳಿದರೂ ಸಹ ನಾನು ಎದುರುದಾರರೊಂದಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಇಂದಿಗೂ ಸಹ ನಾನು ಹೇಳಿದಂತೆ ನನ್ನೊಂದಿಗೆ ಬಾಳುವೆ ಮಾಡಲು ತಯಾರಿದ್ದಾರೆ ಎಂದರೆ ಸರಿಯಲ್ಲ. ನಾನು ಎದುರುದಾರರೊಂದಿಗೆ ಬಂದು ಬಾಳುವೆ ಮಾಡಬೇಕೆಂದು ವಕೀಲರ ಮೂಲಕ ನನಗೆ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ನಾನು ಸದರಿ ನೋಟಿಸಿಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿ, ಕೊರೋನಾ ಇದ್ದ ಕಾರಣ ಉತ್ತರ ಕೊಟ್ಟಿಲ್ಲ. ನಾನು ಉತ್ತರ ಕೊಡದೇ ಇದ್ದ ಕಾರಣ ಎದುರುದಾರರು ನಾನು ಅವರೊಂದಿಗೆ ಬಂದು ಬಾಳುವೆ ನಡೆಸುವಂತೆ ಕೋರಿ ಹಾವೇರಿ ಕೌಟುಂಬಿಕ ನ್ಯಾಯಾಲಯದಲ್ಲಿ ಎಮ್ ಸಿ **178/2020** ನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಹಾಜರಾಗದೇ ಇರುವ ಕಾರಣ ದಿನಾಂಕ **21-1-2021** ರಂದು ಸದರಿ ಅರ್ಜಿಯನು ಪುರಸ್ಕರಿಸಲಾಗಿದೆ ಎಂದರೆ ಸರಿಯಲ್ಲ. ನಾನು ಒಂದು ತಿಂಗಳ ಒಳಗೆ ಎದುರುದಾರರೊಂದಿಗೆ ಹೋಗಿ ಬಾಳುವೆ ಮಾಡಬೇಕೆಂದು ನ್ಯಾಯಾಲಯ ಆದೇಶ ಮಾಡಿತ್ತು ಎಂದರೆ ನನಗೆ ಆರೋಗ್ಯ ಸರಿ ಇರಲಿಲ್ಲ. ನನಗೆ ಒಂದು ತಿಂಗಳು ಟೈಫೈಡ್‌ನಿಂದ ಹುಷಾರಿರಲಿಲ್ಲ. ಆ ನಂತರ ನಾನು ಎದುರುದಾರರೊಂದಿಗೆ ಬಾಳುವೆ ಮಾಡಲು ಹೋಗಿದ್ದಾಗಲೀ, ನೋಟೀಸು ಕೊಡುವುದಾಗಲೀ ಮಾಡಿಲ್ಲ. ನಾನು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಆದ ಆದೇಶವನ್ನು ನಾನು ಪಾಲನೆ ಮಾಡದೇ ಇರುವ ಕಾರಣ ವಿವಾಹ ವಿಚ್ಛೇದನೆ ಕೋರಿ ದಿನಾಂಕ **15-7-2022** ರಂದು ಎದುರುದಾರರು ನನಗೆ ವಕೀಲರ ಮೂಲಕ ನೋಟೀಸು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ನೋಟಿಸಿನಲ್ಲಿ ಎಮ್ ಸಿ ನಂ. **178/ 2020** ರಲ್ಲಿ ಆದ ಆದೇಶದ ಪ್ರಕಾರ ಬಂದು ಬಾಳುವೆ ಮಾಡುವಂತೆ ಇಲ್ಲದೇ ಇದ್ದರೇ ವಿವಾಹ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸುವುದಾಗಿ ಎದುರುದಾರರು

ಬರೆಸಿದ್ದರು ಎಂದರೆ ಸರಿ. ಸದರಿ ನೋಟೀಸು ಸ್ವೀಕರಿಸಿದ ನಂತರ ಎದುರುದಾರರೊಂದಿಗೆ ಹೋಗಿ ಬಾಳುವೆ ಮಾಡಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. ನಾನು ಎದುರುದಾರರೊಂದಿಗೆ ಬಾಳುವೆ ಮಾಡಲು ಇಚ್ಛೆ ಇಲ್ಲದೇ ಇರುವ ಕಾರಣ ಜೀವನಾಂಶ ಕೋರಿ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನೇ ಯಾವುದೇ ಕಾರಣ ಇಲ್ಲದೇ ಎದುರುದಾರರನ್ನು ಸ್ವತಃ ತ್ಯಜಿಸಿ ತವರು ಮನೆಯಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಇಂದಿಗೂ ಸಹ ನನ್ನನ್ನು ಕರೆದುಕೊಂಡು ಹೋಗಿ ಜೀವನ ನಡೆಸಲು ಸಿದ್ಧರಿದ್ದಾರೆ ಎಂದರೆ ನನಗೆ ಅವರಿಂದ ಜೀವ ಬೆದರಿಕೆ ಇದೆ. ಎದುರುದಾರರು ನ್ಯಾಯಾಲಯಕ್ಕೆ ಮುಚ್ಚಳಿಕೆ ಬರೆದುಕೊಟ್ಟರೆ ಅವರೊಂದಿಗೆ ಹೋಗಲು ತಯಾರಿದ್ದೀರಾ ಎಂದರೆ ಇಲ್ಲ.

**5.** ಎದುರುದಾರರು ನನಗೆ ಹೊಡಿ ಬಡಿ ಮಾಡಿ ಜೀವ ಬೆದರಿಕೆ ನೀಡಿದ್ದಾರೆ. ಮದುವೆಯಾದ ಸ್ವಲ್ಪ ದಿನಕ್ಕೆ ಎದುರುದಾರರು ನನಗೆ ಹೊಡಿ ಬಡಿ ಮಾಡಿ ಕೈಗೆ ಗಾಯಪಡಿಸಿದ್ದಾರೆ. ಆ ಬಗ್ಗೆ ನಾನು ಹಾವೇರಿಯ ಹೆಗ್ಗೇರಿ ಆಸ್ಪತ್ರೆಯಲ್ಲಿ ತೋರಿಸಿದ್ದೇನೆ. ತಾರೀಖು, ತಿಂಗಳು, ಇಸವಿ ನೆನಪಿಲ್ಲ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ಚೀಟಿ ಕೊಡುತ್ತಾರೆ ಎಂದರೆ ಸರಿ. ಹೆಗ್ಗೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಹೆಗ್ಗೇರಿ ಆಸ್ಪತ್ರೆಯಲ್ಲಿ ತೋರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳು ಆಗದೇ ಇದ್ದ ಕಾರಣ ಹೆಗ್ಗೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ನೋಟೀಸು ಕೊಟ್ಟ ನಂತರ ಹಾವೇರಿಯ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದೇನೆ ಎಂದರೆ ಸರಿ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್